ಅನುಬಂಧ-IV

ಕರ್ನಾಟಕ ವಿಧಾನ ಸಭೆ

ಹತ್ತನೆ ವಿಧಾನಸಭೆ
(ಆರನೇ ಅಧಿವೇಶನ)
(ಮುಂದುವರಿದ ಉಪವೇಶನಗಳು)

ಕರ್ನಾಟಕ ಧನವಿನಿಯೋಗ (ನಂ.6) ವಿಧೇಯಕ, 1997

(1997ರ ವಿಧಾನ ಸಭಾ ವಿಧೇಯಕ ಸಂಖ್ಯೆ 34)

1997-98ನೇ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಕೆಲವು ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡಲು ಒಂದು ವಿಧೇಯಕ.

1997-98ನೇ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಆ ಪೈಕಿಯಿಂದ ಕೆಲವು ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ನಲವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಕೆಳಕಂಡಂತೆ ಅಧಿನಿಯಮಿತವಾಗಲಿ,

1. ಸಂಕ್ಷಿಪ್ತ ಹೆಸರು: ಈ ಅಧಿನಿಯಮವನ್ನು ಕರ್ನಾಟಕ ಧನವಿನಿಯೋಗ (ನಂ.6). ಅಧಿನಿಯಮ, 1997 ಎಂದು ಕರೆಯತಕ್ಕದು.

2. ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ 1997-98ನೇ ಹಣಕಾಸು ವರ್ಷಕ್ಕಾಗಿ 842,47,93,000 ರೂಪಾಯಿಗಳ ನೀಡಿಕೆ: ಅನುಸೂಚಿಯ 2ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾದ ಸೇವೆಗಳ ಸಂಬಂಧದಲ್ಲಿ, 1997-98ನೇ ಹಣಕಾಸು ವರ್ಷದಲ್ಲಿ ಸಂದಾಯ ಮಾಡುವಾಗ ಒದಗಿಬರುವ ಹಲವಾರು ಖರ್ಚುಗಳನ್ನು ವಹಿಸುವುದಕ್ಕಾಗಿ ಅನುಸೂಚಿಯ 5ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾಗಿರುವ ಮೊತ್ತದಲ್ಲಿ ಎಂಟು ನೂರ ನಲವತ್ತೆರಡು ಕೋಟಿ ನಲವತ್ತೇಳು ಲಕ್ಷ, ತೊಂಬತ್ತ ಮೂರು ಸಾವಿರ ರೂಪಾಯಿಗಳಿಗೆ ಮೀರದಷ್ಟು ಮೊಬಲಗನ್ನು ಮಾತ್ರ ಕರ್ನಾಟಕ ರಾಜ್ಯ ಸಂಚಿತನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡತಕ್ಕುದು ಮತ್ತು ಉಪಯೋಗಿಸತಕ್ಕುದು.

3. ಧನವಿನಿಯೋಗ: ಈ ಅಧಿನಿಯಮದ ಮೂಲಕ, ಕರ್ನಾಟಕ ರಾಜ್ಯದ ಸಂಚಿತ

ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡಲು ಮತ್ತು ಉಪಯೋಗಿಸಲು ಅಧಿಕಾರ ನೀಡಲಾದ ಮೊತ್ತಗಳನ್ನು, ಸದರಿ ವರ್ಷಕ್ಕೆ ಸಂಬಂಧಪಟ್ಟಂತೆ ಅನುಸೂಚಿಯಲ್ಲಿ ತಿಳಿಸಲಾದ ಸೇವೆಗಳು ಮತ್ತು ಉದ್ದೇಶಗಳಿಗಾಗಿ ವಿನಿಯೋಗಿಸತಕ್ಕದು.

ಅನುಸೂಚಿ

(2 ಮತ್ತು 3ನೇ ಪ್ರಕರಣಗಳನ್ನು ನೋಡಿ)

ಬೇಡಿಕೆ ಸಂಖ್ಯೆ	ಸೇವೆಗಳು ಮತ್ತು ಉದ್ದೇಶಗಳು		ಮೀರದ ಮೊಬಲಗು		ಒಟ್ಟು
			ವಿಧಾನ ಸಭೆಯಿಂದ ಪುರಸ್ಕೃತವಾದುದನ್ನು	ಸಂಚಿತ ನಿಧಿಯಿಂದ ಪ್ರಭೃತವಾದುದನ್ನು	
1	2		3	4	5
1.	ಕೃಷಿ	ರಾಜಸ್ವ	53,00,000	-	53,00,000
2.	ತೋಟಗಾರಿಕೆ	ರಾಜಸ್ವ	4,84,00,000	-	4,84,00,000
3.	ಪಶು ಸಂಗೋಪನೆ	ರಾಜಸ್ವ	1,000	-	1,000
4.	ಮೀನುಗಾರಿಕೆ	ರಾಜಸ್ವ	1,05,00,000	-	1,05,00,000
5.	ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು (ಜವಳಿ, ಸಕ್ಕರೆ ಮತ್ತು ರೇಷ್ಮೆ ವ್ಯವಸಾಯ ಹೊರತು)	ರಾಜಸ್ವ	5,00,00,000	-	5,00,00,000
		ಬಂಡವಾಳ	8,00,00,000	-	8,00,00,000
6.	ಗಣಿಗಳು ಮತ್ತು ಭೂ ವಿಜ್ಞಾನ	ರಾಜಸ್ವ	3,50,00,000	2,25,000	3,52,25,000
7.	ಚಿಕ್ಕಪುಟ್ಟ ಉದ್ಯಮಗಳು	ರಾಜಸ್ವ	50,00,000	-	50,00,000

1	2	3	4	5
8.	ರೇಷ್ಮೆ ವ್ಯವಸಾಯ	ಬಂಡವಾಳ	4,04,47,000	-	4,04,47,000
9.	ಸಕ್ಕರೆ	ರಾಜಸ್ವ	2,45,36,000	-	2,45,36,000
10.	ಲೇಖನ, ಸಾಮಗ್ರಿ ಮತ್ತು ಮುದ್ರಣ	ರಾಜಸ್ವ	-	5,86,000	5,86,000
11.	ಉನ್ನತ ಶಿಕ್ಷಣ	ರಾಜಸ್ವ	10,00,000	-	10,00,000
12.	ಯುವಜನ ಸೇವೆಗಳು	ರಾಜಸ್ವ	8,50,00,000	-	8,50,00,000
		ಬಂಡವಾಳ	50,00,00,000	-	50,00,00,000
13.	ಕಲೆ, ಸಂಸ್ಕೃತಿ ಮತ್ತು ಕನ್ನಡ ಅಭಿವೃದ್ಧಿ	ರಾಜಸ್ವ	3,64,000	-	3,64,000
14.	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ	ರಾಜಸ್ವ	12,01,56,000	-	12,01,56,000
15.	ವರಮಾನ, ವೃತ್ತಿಗಳು, ಮಾರಾಟ ಮತ್ತು ಇತರ ಸೇವೆಗಳು ಮೇಲಿನ ತೆರಿಗೆಗಳು	ರಾಜಸ್ವ	10,50,00,000	-	10,50,00,000
20.	ಆಹಾರ ಮತ್ತು ನಾಗರೀಕ ಸರಬರಾಜು	ರಾಜಸ್ವ	1,08,81,000	-	1,08,81,000
21.	ಅರಣ್ಯ	ರಾಜಸ್ವ	15,00,000	-	15,00,000
22.	ರಾಜ್ಯದ ಅಬಕಾರಿ	ಬಂಡವಾಳ	2,00,00,000	-	2,00,00,000

1	2		3	4	5
31.	ನಗರಾಭಿವೃದ್ಧಿ (ಬೆಂಗಳೂರು ಅಭಿವೃದ್ಧಿ ಯೋಜನೆಗಳು ಮತ್ತು ನಗರ ಮೂಲ ಸೌಕರ್ಯ ಅಭಿವೃದ್ಧಿ ನಿಗಮ ಹೊರತುಪಡಿಸಿ)	ರಾಜಸ್ವ	94,80,000	-	94,80,000
		ಬಂಡವಾಳ	2,21,20,000	-	2,21,20,000
32.	ಬೆಂಗಳೂರು ಅಭಿವೃದ್ಧಿ	ಬಂಡವಾಳ	3,00,00,000	-	3,00,00,000
34.	ಭಾರಿ ಮತ್ತು ಮಧ್ಯಮ ನೀರಾವರಿ	ಬಂಡವಾಳ	1,50,00,00,000	-	1,50,00,00,000
36.	ನ್ಯಾಯ ಪರಿಪಾಲನೆ	ರಾಜಸ್ವ	15,00,000	-	15,00,000
38.	ಸಚಿವಾಲಯ	ರಾಜಸ್ವ	30,00,000	-	30,00,000
39.	ಜಿಲ್ಲಾ ಆಡಳಿತ	ರಾಜಸ್ವ	1,22,25,000	-	1,22,25,000
40.	ಸಾಮಾನ್ಯ ಆಡಳಿತ ಇತ್ಯಾದಿ	ರಾಜಸ್ವ	5,53,00,000	-	5,53,00,000
41.	ಯೋಜನೆ ಮತ್ತು ಸಾಂಖ್ಯಿಕ ಹಣಕಾಸು (ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮತ್ತು ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿಗಳ ಹೊರತು)	ರಾಜಸ್ವ	13,00,000	-	13,00,000
44.	ಕಟ್ಟಡಗಳು	ರಾಜಸ್ವ	-	47,88,000	47,88,000
		ಬಂಡವಾಳ	100,96,00,000	46,85,000	101,42,85,000

1	2		3	4	5
45.	ರಸ್ತೆಗಳು ಮತ್ತು ಸೇತುವೆಗಳು	ಬಂಡವಾಳ	49,25,00,000	-	49,25,00,000
47.	ವಿದ್ಯುಚ್ಛಕ್ತಿ ಯೋಜನೆಗಳು	ರಾಜಸ್ವ	320,00,00,000	-	320,00,00,000
48.	ಭೂ ಕಂದಾಯ ಇತ್ಯಾದಿಗಳು	ರಾಜಸ್ವ	5,23,00,000	3741,000	5,60,41,000
50.	ಮತೀಯ ಮತ್ತು ಧರ್ಮಾದಾಯ ಸಂಸ್ಥೆಗಳು	ರಾಜಸ್ವ	10,00,000	-	10,00,000
52.	ಸಹಕಾರ	ಬಂಡವಾಳ	52,72,000	-	52,72,000
55.	ಗ್ರಾಮೀಣ ಅಭಿವೃದ್ಧಿ	ರಾಜಸ್ವ	1,00,00,000	-	1,00,00,000
57.	ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಕಲ್ಯಾಣ	ರಾಜಸ್ವ	82,94,27,000	-	82,94,27,000
61.	ವಸ್ತ್ರೋದ್ಯಮಗಳು	ಬಂಡವಾಳ	3,26,58,000	-	3,26,58,000
62.	ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರು	ರಾಜಸ್ವ	1,000	-	1,000
	ಒಟ್ಟು {	ರಾಜಸ್ವ	467,81,71,000	93,40,000	468,75,11,000
		ಬಂಡವಾಳ	373,25,97,000	46,85,000	373,72,82,000
		ಒಟ್ಟು ಜುಮ್ಲಾ	841,07,68,000	1,40,25,000	842,47,93,000

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

(ವಿಧೇಯಕವನ್ನು ಮಂಡಿಸುವಾಗ ಲಗತ್ತಿಸಿದಂತೆ)

1997-98ನೇ ಹಣಕಾಸು ವರ್ಷದಲ್ಲಿ ಸಂದಾಯ ಮಾಡುವಾಗ ಒದಗಿಬರುವ ಹಲವಾರು ಖರ್ಚುಗಳನ್ನು ವಹಿಸುವುದಕ್ಕಾಗಿ ರಾಜ್ಯದ ಸಂಚಿತ ನಿಧಿಯೊಳಗಿನಿಂದ ವಿನಿಯೋಗಿಸಲು ಭಾರತ ಸಂವಿಧಾನದ 204ನೇ ಅನುಚ್ಛೇದದ ಉಪ-ಬಂಧಗಳನುಸಾರವಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

ಸಿದ್ದರಾಮಯ್ಯ
ಉಪ ಮುಖ್ಯಮಂತ್ರಿಗಳು ಮತ್ತು ಹಣಕಾಸು,
ಯೋಜನಾ ಹಾಗೂ ಕಾರ್ಮಿಕ ಸಚಿವರು,

ಯಾಕೂಬ್ ಷರೀಫ್
ಕಾರ್ಯದರ್ಶಿ